ಹನೆಕೆಗೆ 'ಉತ್ತಮ ನಿರ್ದೇಶಕ' ಪ್ರಶಸ್ತಿಯನ್ನು ತಂದುಕೊಟ್ಟಿತು. ಸಮಕಾಲೀನ ಸಿನಿಮಾ ಜಗತ್ತಿನಲ್ಲಿ ಈತನನ್ನು ಪ್ರಮುಖ ನಿರ್ದೇಶಕನನ್ನಾಗಿಸಿದ ಚಿತ್ರವೂ ಇದುವೇ!

ಕೆಚೆ ಶುರುವಾಗುವುದೇ ಒಂದು ದೀರ್ಘ ದೃಶ್ಯದಿಂದ. ಐದು ನಿಮಿಷದ ಒಂದೇ ವೈಡ್ ಶಾಟ್! ಅತ್ತಿತ್ತ ಸಾಗದೆ ನಿಶ್ಚಲವಾಗಿರುವ ಕ್ಯಾಮೆರಾ! ಹಿನ್ನೆಲೆ ಸಂಗೀತವೂ ಇರದ 'ನಿರ್ಜೀವ ಶಾಟ್'! ಚಣ ಕಳೆದು ಯಾವುದೇ ಅಬ್ಬರವಿಲ್ಲದೆ ಚಿತ್ರದ ಟೈಟಲ್ ಕಾರ್ಡ್ಸ್ ಫೋಟೊದಂತೆ ಕಾಣುತ್ತಿರುವ ಆ ದೃಶ್ಯದ ಮೇಲೆ ಟೈಪ್ ಆಗುತ್ತದೆ. ನಗರದಲ್ಲಿನ ಮೇಲ್ ಮಧ್ಯಮ ವರ್ಗದ ಬಡಾವಣೆಯೊಂದರ ಮನೆಯೊಂದನ್ನು ಕೇಂದ್ರೀಕರಿಸಿರುವ ಆ ದೃಶ್ಯದಲ್ಲಿ ಆಗಾಗ ಕಾರುಗಳು ಹಾದು ಹೋಗುತ್ತವೆ, ಮನುಷ್ಯರು ನಡೆದಾಡುತ್ತಾರೆ; ಮೆಲ್ಲಗೆ ಹಿನ್ನೆಲೆಯಲ್ಲಿ ಒಂದು ಗಂಡು, ಒಂದು ಹೆಣ್ಣು ಮಾತನಾಡುತ್ತಿರುವುದು ಕೇಳಿಸತೊಡಗುತ್ತದೆ. 'ಇರು, ಇರು ನಾನೂ ಬಂದೀದೀನಿ!...' ಎಂಬ ಮಾತು ನಮಗೆ ಕೇಳಿಸುವಾಗ ನಮಗೆ ಕಾಣುತ್ತಿರುವ ದೃಶ್ಯ 'ರಿವೈಂಡ್' ಆಗುತ್ತದೆ. ಆಗಲೇ ನಮಗೆ ಗೊತ್ತಾಗುವುದು ನಾವು ನೋಡುತ್ತಿರುವ ಆ ದೀರ್ಘ ದೃಶ್ಯ ಟೀವಿಯಲ್ಲಿ ಕಾಣಿಸುತ್ತಿರುವ ಒಂದು ವಿಡಿಯೊ ಕ್ಯಾಸೆಟ್‌ನ ದೃಶ್ಯ ಎಂಬುದು. ತಮ್ಮ ಮನೆಯನ್ನು ಯಾರೋ ದೂರದಲ್ಲಿ ನಿಂತು ವಿಡಿಯೊ ಮಾಡಿ ಕಳುಹಿಸಿರುವುದು ಯಾಕಾಗಿ ಎಂದು ಗೊತ್ತಾಗದೆ ಜಾರ್ಜ್ ಮತ್ತವನ ಮಡದಿ ಆನ್ನಿ (Anne) ಇಬ್ಬರೂ ಕಳವಳಕ್ಕೀಡಾಗಿದ್ದಾರೆ. ತಮ್ಮನ್ಯಾರೊ ಹಿಂಬಾಲಿಸುತ್ತಿದ್ದಾರೆ ಎಂದುಕೊಂಡು ಆತಂಕಕ್ಕೊಳಗಾಗಿದ್ದಾರೆ. ಟೀವಿ ಚಾನೆಲ್ ಒಂದರಲ್ಲಿ ಕೆಲಸ ಮಾಡುತ್ತಿರುವ (ಟಾಕ್ ಶೋ ನಿರೂಪಕ) ಜಾರ್ಜ್ ಮತ್ತು ಪುಸ್ತಕ ಪ್ರಕಾಶನ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿರುವ ಆನ್ನಿ ಇಬ್ಬರಿಗೆ 12 ವರ್ಷ ವಯಸ್ಸಿನ ಪಿಯೊ ಎಂಬ ಹೆಸರಿನ ಮಗನಿದ್ದಾನೆ; ಆತ ಈಜು ಕಲಿಯುತ್ತಿದ್ದಾನೆ. ಒಟ್ಟಿನಲ್ಲಿ ಜಾರ್ಜ್ ಮತ್ತು ಆನ್ನಿ ಸುಖೀ ಜೀವನವನ್ನು ನಡೆಸುತ್ತಿರುವಂತೆಯೇ ಕಾಣುತ್ತದೆ, ಆ ವಿಡಿಯೊ ಕ್ಯಾಸೆಟ್ ಬರುವವರೆಗೂ. ತಮ್ಮ ಮನೆಯ ಗೇಟ್‌ನಲ್ಲಿ ಯಾರೋ ಇಟ್ಟು ಹೋಗುತ್ತಿರುವ ವಿಡಿಯೊ ಕ್ಯಾಸೆಟ್ ಅವರ ತಣ್ಣಗಿನ ಬದುಕನ್ನು ಕದಡುತ್ತದೆ. ಸ್ವಲ್ಪ ದಿನಗಳಲ್ಲೇ ಎರಡನೆಯ ವಿಡಿಯೊ ಕ್ಯಾಸೆಟ್ ಬರುತ್ತದೆ; ಆದರೆ ಈ ಬಾರಿ ಒಂದು ವಿಶೇಷ, ಕ್ಯಾಸೆಟ್ ಜೊತೆ ಕೈಯಲ್ಲಿ ಬಿಡಿಸಿರುವಂತಹ ಒಂದು ಚಿತ್ರ (ಡ್ರಾಯಿಂಗ್) ಇಟ್ಟು ಹೋಗಿದ್ದಾರೆ. ಆ ಡ್ರಾಯಿಂಗ್ ನೋಡಿದ್ದೇ ಆನ್ನಿ ಮತ್ತಷ್ಟು ಕಳವಳಕ್ಕೀಡಾಗುತ್ತಾಳೆ. ರಕ್ತವನ್ನು ಉಗುಳುತ್ತಿರುವ ಮಗುವೊಂದರ ಡ್ರಾಯಿಂಗ್ ಅದು. ಜಾರ್ಜ್ ಈ ಚಿತ್ರವನ್ನು ನೋಡಿ ತಮ್ಮ ಮಗನ ಸ್ನೇಹಿತರ್‍ಯಾರೊ ಈ ಕೆಲಸವನ್ನು ಮಾಡುತ್ತಿರಬೇಕು, ಅವನನ್ನು ಕೇಳುವ ಎನ್ನುತ್ತಾನೆ. ಆದರೆ ಆನ್ನಿ ಈ ಮಾತನ್ನು ಒಪ್ಪುವುದಿಲ್ಲ, ಮತ್ತು ಮಗನನ್ನು ಈ ಕುರಿತು ಕೇಳುವುದು ಬೇಡ ಎನ್ನುತ್ತಾಳೆ. ಈ ನಡುವೆ ಆಗಾಗ ಅನಾಮಿಕ ದೂರವಾಣಿ ಕರೆಗಳು ಮನೆಗೆ ಬರುತ್ತಿವೆ. ಮೂರನೇ ವಿಡಿಯೊ ಕ್ಯಾಸೆಟ್ ಮತ್ತೊಂದು ಡ್ರಾಯಿಂಗ್‌ಅನ್ನು ಹೊತ್ತು ತರುತ್ತದೆ. ಇಬ್ಬರೂ ಮತ್ತಷ್ಟು ಆತಂಕಕ್ಕೊಳಗಾಗುತ್ತಾರೆ. ರುಂಡವಿಲ್ಲದ ಹುಂಜವೊಂದು ರಕ್ತ ಚೆಲ್ಲುತ್ತಾ ನಿಂತಿದೆ. ತಮ್ಮ ಕುಟುಂಬಕ್ಕೆ ಎದುರಾಗಲಿರುವ ಅನಾಹುತದ ಎಚ್ಚರಿಕೆಯಾಗಿಯೇ ಅದನ್ನು ಅರ್ಥೈಸಿಕೊಳ್ಳುವ ಆನ್ನಿ ಪೊಲೀಸರಿಗೆ ದೂರು ಕೊಡುವ ಎನ್ನುತ್ತಾಳೆ. ಪೊಲೀಸರು ಈ ದೂರನ್ನು ಸ್ವೀಕರಿಸುವುದಿಲ್ಲ ಎನ್ನುವ ಜಾರ್ಜ್ ತನಗೊಬ್ಬ ವ್ಯಕ್ತಿಯ ಮೇಲೆ ಅನುಮಾನವಿದೆ, ಇದನ್ನು ಇಷ್ಟರಲ್ಲೇ ಪತ್ತೆ ಹಚ್ಚುತ್ತೇನೆ ಎನ್ನುತ್ತಾನೆ. ಕತೆ ಸಾಗುತ್ತಿರುವಾಗ ಮಧ್ಯೆ ಮಧ್ಯೆ ಬಾಲಕನೊಬ್ಬ ರಕ್ತ ಉಗುಳುತ್ತಿರುವ ದೃಶ್ಯವೊಂದು 'ಇನ್ಸರ್ಷನ್ ಶಾಟ್' ಆಗಿ ಬಂದು ನಮ್ಮ ಕತೆಯ ಅನುಸರಿಸುವಿಕೆಗೆ ತಡೆ ಒಡ್ಡಿ ನಮ್ಮನ್ನು ಗಲಿಬಿಲಿಗೊಳಿಸುತ್ತಲೇ ಇರುತ್ತದೆ. ಕತೆಗೂ ಇದಕ್ಕೂ ಏನು ಸಂಬಂಧ ಎಂದು ನಮಗೆ